ವಿಶೇಷವಾಗಿ ನಾರದಮುನಿ ಹಾಗೆ ಈ ಲೋಕದಿಂದ ಆ ಲೋಕದಲ್ಲಿ ಮತ್ತೆ ಅಲ್ಲಿಂದ ಮಾಯವಾಗಿ ಈ ಲೋಕದಲ್ಲಿ ಏಕ್‌ದಂ ಪ್ರತ್ಯಕ್ಷವಾಗಿಬಿಡುತ್ತಿದ್ದರು' ಎಂದಾಗ 'ಕರ್ರೆಕ್ಟ್' ಎಂದ ಅಮಿತ್.

'ಅದೆಲ್ಲಾ ಪುರಾಣದ ಮಾತಾಯಿತು. ಈಗಿನ ಈ ವಿಜ್ಞಾನ ಯುಗದಲ್ಲಿ ಇದು ಸಾಧ್ಯವಿದೆಯೇ?' ದಿಲೀಪ್ ಪ್ರಶ್ನೆ ಇಟ್ಟ.

'ಸಾಧ್ಯ ಮಾಡಿಸಲಿಕ್ಕೆಂದೇ ನಾನು ನೀವು ಇರೋದು. ಕಥೆಗಳ ಮೂಲಕ ನಮ್ಮ ನಮ್ಮ ವಿಚಾರ ಕಲ್ಪನೆಗಳನ್ನು ಹರಿಬಿಡುವುದು ನಮ್ಮ ಕೆಲಸ. ಕಾರ್ಯರೂಪಕ್ಕೆ ತರುವುದು ವಿಜ್ಞಾನಿಗಳ ಮತ್ತು ತಂತ್ರಜ್ಞರ ಕೆಲಸ.' ಅಮಿತ್ ತನ್ನ ನಿಲುವನ್ನು ಸ್ಪಷ್ಟಪಡಿಸಿದ.

'ನಾನು ಬರೆಯಬೇಕೆಂದಿರುವ ಕಥೆಯಲ್ಲಿ ಕಥಾನಾಯಕ ಈ ಜಿಜ್ಞಾಸೆಯನ್ನೇ ಬೆಳೆಸಿಕೊಂಡಿರುತ್ತಾನೆ. ಅವನ ಮಿತ್ರನೊಬ್ಬ ವಿಜ್ಞಾನಿ, ಅಮೆರಿಕದಲ್ಲಿರುತ್ತಾನೆ. ಅವನದೇ ಸ್ವಂತ ಒಂದು ಪ್ರಯೋಗಾಲಯವಿದೆ. ಈಗಾಗಲೇ ಅವನು ತನ್ನ ಯೋಜನೆಗೆ ರೂಪುರೇಷೆ ಹಾಕಿಕೊಂಡುಬಿಟ್ಟಿದ್ದಾನೆ. ಮಾನವರನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಕಳಿಸುವಂತಾಗಬೇಕು, ಇದು ಅವನ ದೂರದ ದೃಷ್ಟಿ, ದೂರದೃಷ್ಟಿ, ಗುರಿ, ಮಹತ್ವಾಕಾಂಕ್ಷೆ... ಏನಾದರೂ ಅಂದುಕೊಳ್ಳಿ. ನನ್ನ ಕಲ್ಪನೆ ನಿಮಗೆ ಅರ್ಥವಾಯಿತೇ?' ಅಮಿತ್ ಹುಬ್ಬೇರಿಸಿ ಕೇಳಿದ.

'ಪೌರಾಣಿಕ ಕಥೆಗೆ ಈ ವಸ್ತು ಹೊಂದಬಹುದು, ಆದರೆ ನೀನು ಬರೆಯುತ್ತಿರೋದು ವೈಜ್ಞಾನಿಕ ಕಥೆ' ಎಂದೆ ನಾನು. ಅವರೂ ಇಬ್ಬರೂ ನನಗೆ ಸಾಥ್ ನೀಡಿದರು. ಲಖನ್ ತುಂಬಾ ಪ್ರ್ಯಾಕ್ಟಿಕಲ್ ಮನುಷ್ಯ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದ 'ವಸ್ತುಗಳನ್ನು ಕಳಿಸಬಹುದೇನೋ, ಆದರೆ ಮನುಷ್ಯರನ್ನು... ಸಾಧ್ಯವೇ ಇಲ್ಲ' ಎಂದು ಕಡ್ಡಿ ತುಂಡರಿಸಿದ.

'ಇದೇ ಮಾತನ್ನು ನನ್ನ ಕಥಾನಾಯಕ ಆ ದೂರದೃಷ್ಟಿಯ ವಿಜ್ಞಾನಿಗೆ ನೀನು ಹೇಳಿದಹಾಗೇ ಹೇಳುತ್ತಾನೆ. ವಿಜ್ಞಾನಿ ನಗುತ್ತಾನೆ. ಬೇಕಾದರೆ ನೋಡುತ್ತಿರು, ಮುಂದಿನ ವಾರವೇ ಎಮ್. ಟಿ ಮೂಲಕ ನಿನ್ನ ಮನೆಗೆ ನಮ್ಮ ಮನೆಯಿಂದಲೇ ಕಾಫಿ ನಾಷ್ಟಾ ಕಳಿಸುತ್ತೇನೆ ಅಂತ ಹೇಳಿ ಕಳಿಸಿಯೇಬಿಟ್ಟಿದ್ದಾನೆ! ಇದಕ್ಕೇನಂತೀರಿ?' ಅಮಿತ್ ಮತ್ತೆ ಹುಬ್ಬೇರಿಸಿ ಕೇಳಿದ.

ನಾವೇನನ್ನೋದು? ದೀರ್ಘ ಉಸಿರು ಹಾಕಿ ತಣ್ಣಗೆ ಕುಳಿತೆವು.

'ಕಥಾನಾಯಕನೂ ಆಗ ನಿಮ್ಮಂತಹ ಸ್ಥಿತಿಯನ್ನೇ ಅನುಭವಿಸಿದ್ದ. ಡೈನಿಂಗ್ ಟೇಬಲ್ ಮೇಲೆ ಪ್ರತ್ಯಕ್ಷವಾದ ನಾಷ್ಟಾ ಮುಗಿಸಿ ಕಾಫಿ ಕುಡಿದಿದ್ದಾನೆ.'

'ಮುಂದೆ?' ಒಟ್ಟಾಗಿಯೇ ಕೇಳಿದೆವು.

'ಮುಂದೇನು? ಯೋಚಿಸಿರಲ್ಲಾ ನೀವೂ...'

ದಿಲೀಪನಿಗೆ ಕನಸು ಕಾಣಲಿಕ್ಕೆ ಇಷ್ಟೇ ಬೇಕಾಗಿತ್ತು. ಒಂದು ವೇಳೆ ಈ ಎಮ್.ಟಿ ಪ್ರಗತಿ ಸಾಧಿಸಿ ಒಂದು ಗ್ರಹದಿಂದ ಇನ್ನೊಂದು ಗ್ರಹಕ್ಕೆ ನಾರದ ಮಹಾಶಯನಂತೆ ಅಡ್ಡಾಡುವಂತಾದರೆ ದೂರ ಗ್ರಹದಲ್ಲಿರುವ ತನ್ನ ರೂಪಸಿ, ಕನಸಿನ ಕನ್ಯೆ ನಿಜವಾಗಿಯೂ ನಮ್ಮಲ್ಲಿಗೆ ಬಂದು ಮುಂಬೈನ ಸಮುದ್ರತೀರದಲ್ಲಿ ಇಳಿಯುತ್ತಾಳೆ, ಪ್ರಿಯಕರನನ್ನು ಅಂದರೆ ತನ್ನನ್ನು ಭೆಟ್ಟಿ ಆಗ್ತಾಳೆ ಅಂತ ಕನಸು ಕಾಣತೊಡಗಿದ! ಸಂಭ್ರಮಪಡತೊಡಗಿದ.

ಲಖನ್ ಮಾತಿಗಾಗಿ ನಾನು ದಾರಿ ಕಾಯ್ದೆ. ಬಂದೇಬಿಟ್ಟಿತು ಬಾಣ! 'ಮನುಷ್ಯ ಅಂದರೆ ಅವಯವಗಳ ಮೂಟೆಯಲ್ಲ. ಸರಿಯಾದ ಸ್ಥಳಗಳಲ್ಲಿ ಸರಿಯಾಗಿ ಜೋಡಿಸಿಟ್ಟಿರುವಂತಹವು. ಟ್ರಾನ್ಸ್‌ಮಿಶನ್ನಿನಲ್ಲಿ ಎಲ್ಲೂ ಏನೂ ಹೆಚ್ಚು ಕಡಿಮೆ ಆಗಬಾರದು. ಅಕಸ್ಮಾತ್ ಹಾಗೇನಾದರೂ ಆದರೆ ಜೀವಕ್ಕೇ ಅಪಾಯ ಉಂಟಾಗಬಹುದು. ಮಾನವ ದೇಹದ ಟ್ರಾನ್ಸ್‌ಮಿಶನ್ ಮಾಡುವುದು ಸುಲಭದ